# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 582**

**ಉತ್ತರಿಸಬೇಕಾದ ದಿನಾಂಕ : 20.02.2024**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2017ನೇ ಸಾಲಿನ ರೂ.50,000/-ಗಳ ಸಾಲಮನ್ನಾ ಯೋಜನೆ ಮತ್ತು 2018 ನೇ ಸಾಲಿನ ರೂ.1,00,000/-ಗಳ ಸಾಲಮನ್ನಾ ಯೋಜನೆಯಡಿ ಸಾಲ ಮನ್ನಾಕ್ಕೊಳಪಡುವ ಫಲಾನುಭವಿಗಳ ಸಂಖ್ಯೆ ಎಷ್ಟು; ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಬೇಕಾದ ಅನುದಾನವೆಷ್ಟು; ಈ ಪೈಕಿ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಬಿಡುಗಡೆಯಾಗದೆ ಬಾಕಿ ಉಳಿದಿರುವ ಅನುದಾನವೆಷ್ಟು; (ಜಿಲ್ಲಾವಾರು ಮತ್ತು ವರ್ಷವಾರು ಸಂಪೂರ್ಣ ವಿವರಗಳನ್ನು ನೀಡುವುದು) | 2017 ನೇ ಸಾಲಿನ ರೂ.50,000 ಗಳ ಸಾಲ ಮನ್ನಾ ಯೋಜನೆಯಲ್ಲಿ 22.27 ಲಕ್ಷ ರೈತರಿಗೆ ಅಂದಾಜು ರೂ.8,164.99 ಕೋಟಿಗಳ ಲಾಭ ದೊರೆಯುತ್ತದೆಂದು ಅಂದಾಜಿಸಲಾಗಿತ್ತು. ಯೋಜನೆಯಲ್ಲಿ ಸಹಕಾರ ಸಂಘಗಳು ಅಂತಿಮವಾಗಿ 21.77 ಲಕ್ಷ ರೈತರಿಗೆ ರೂ. 7,761.18 ಕೋಟಿ ಸಾಲ ಮನ್ನಾ ಕ್ಲೇಮು ಸಲ್ಲಿಸಿದ್ದು, 21.03 ಲಕ್ಷ ರೈತರ ರೂ. 7,631.01 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನೂ 0.74 ಲಕ್ಷ ರೈತರಿಗೆ ಸಂಬಂಧಿಸಿದಂತೆ ರೂ. 131.30 ಕೋಟಿಗಳ ಮೊತ್ತವನ್ನು ಸಹಕಾರ ಸಂಘಗಳಿಗೆ ಪಾವತಿಸಲು ಬಾಕಿ ಇರುತ್ತದೆ.<br><br>2018 ನೇ ಸಾಲಿನ ರೂ. 1 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ 20.38 ಲಕ್ಷ ರೈತರಿಗೆ ರೂ.9,448.62 ಕೋಟಿಗಳ ಸಾಲ ಮನ್ನಾ ಪ್ರಯೋಜನ ದೊರೆಯುವುದಾಗಿ ಅಂದಾಜಿಸಲಾಗಿತ್ತು.<br><br>ಸಹಕಾರ ಸಂಘಗಳು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಅಭಿವೃದ್ಧಿ ಪಡಿಸಿದ ಸಾಲ ಮನ್ನಾ ತಂತ್ರಾಂಶದಲ್ಲಿ 19.07 ಲಕ್ಷ ರೈತರ ಮಾಹಿತಿಯನ್ನು ಅಳವಡಿಸಿ ನಂತರ ಅರ್ಹತೆ ಹೊಂದದಿರುವ 1.57 ಲಕ್ಷ ರೈತರನ್ನು ತಂತ್ರಾಂಶದಲ್ಲಿ ತಿರಸ್ಕರಿಸಿದ ನಂತರ ಅಂತಿಮವಾಗಿ 17.50 ಲಕ್ಷ ರೈತರ ಮಾಹಿತಿಯು ಇರುತ್ತದೆ. ಈ ಪೈಕಿ ಎಲ್ಲಾ ಷರತ್ತುಗಳನ್ನು ಪೂರೈಸಿರುವ 17.37 ಲಕ್ಷ ರೈತರಿಗೆ ರೂ. 8154.98 ಕೋಟಿಗಳ ಸಾಲ ಮನ್ನಾ ಮಾಡಲು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಿಂದ ಹಸಿರು ಪಟ್ಟಿ ನೀಡಲಾಗಿದ್ದು, ಸರ್ಕಾರ 17.06 ಲಕ್ಷ ರೈತರ ರೂ. 7,987.47 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>ಹಸಿರು ಪಟ್ಟಿ ರೈತರ ಪೈಕಿ ಬಾಕಿ ಇರುವ 0.31 ಲಕ್ಷ ರೈತರಿಗೆ ರೂ. 167.51 ಕೋಟಿಗಳನ್ನು ಬಿಡುಗಡೆ ಮಾಡಲು ಬಾಕಿ ಇರುತ್ತದೆ. |

| | | |
|---|---|---|
| ಆ) | ಈ ಎರಡು ವರ್ಷಗಳ ಸಾಲ ಮನ್ನಾ ಯೋಜನೆಯಡಿ ರಾಮನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳಿಗೆ ಬಿಡುಗಡೆಯಾಗದೆ ಬಾಕಿ ಉಳಿದಿರುವ ಸುಮಾರು ರೂ.1075 ಲಕ್ಷಗಳ ಅನುದಾನವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಬಾಕಿ ಉಳಿದಿರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಹೌದು.<br><br>ರಾಮನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ರೂ.50,000 ಗಳ ಸಾಲ ಮನ್ನಾ ಯೋಜನೆಯಲ್ಲಿ ರೂ.14.45 ಕೋಟಿ ಮತ್ತು ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ರೂ.2.95 ಕೋಟಿ ಬಿಡುಗಡೆಗೆ ಬಾಕಿ ಇರುತ್ತದೆ. ರೂ.50,000ವರೆಗಿನ ಸಾಲ ಮನ್ನಾ ಯೋಜನೆ ಹಾಗೂ ರೂ.1.00ಲಕ್ಷವರೆಗಿನ ಸಾಲಮನ್ನಾ ಯೋಜನೆಯಲ್ಲಿ ಬಿಡುಗಡೆಗೆ ಬಾಕಿ ಇರುವ ರೂ.361.67 ಕೋಟಿಗಳನ್ನು ಬಿಡುಗಡೆಗೊಳಿಸುವಂತೆ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಮಂಡಿಸಿದ್ದು, ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.<br><br>ಮುಂದುವರೆದು, 2024-25 ನೇ ಸಾಲಿನ ಆಯವ್ಯಯದಲ್ಲಿ ರೂ.50,000/- ಸಾಲ ಮನ್ನಾ ಯೋಜನೆಯಡಿ ಡಿ.ಸಿ.ಸಿ ಬ್ಯಾಂಕುಗಳಿಗೆ ಬಾಕಿ ಇರುವ ರೂ.132 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. |
| ಇ) | ಬಾಕಿ ಉಳಿದಿರುವ ಅನುದಾನದ ಬಿಡುಗಡೆಗಾಗಿ 5-6 ವರ್ಷಗಳಿಂದ ಕಾಯುತ್ತಿರುವ ಸುಮಾರು 2310 ಅರ್ಹ ರೈತ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೀಡಾಗಿರುವುದು ಮತ್ತು ಇವರ ಸಾಲ ಮನ್ನಾ ಆಗದಿರುವುದರಿಂದ ಇವರಿಗೆ ಹೊಸ ಸಾಲ ಸೌಲಭ್ಯಗಳನ್ನು ಒದಗಿಸಲು ಬ್ಯಾಂಕ್‌ಗಳು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಂತಹ ರೈತರಿಗೆ ಹೊಸ ಸಾಲ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;(ವಿವರ ನೀಡುವುದು) | ಹೌದು.<br><br>ಕ್ರಮ ಸಂಖ್ಯೆ 'ಆ' ನಲ್ಲಿ ತಿಳಿಸಿರುವಂತೆ ಕ್ರಮವಹಿಸಲಾಗಿದೆ. |

**ಸಂಖ್ಯೆ: ಸಿಒ 33 ಸಿಎಲ್‌ಎಸ್ 2024**

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು